# ಬೆಳಕಿನ ನೆರಳು

**ಮಹಾತ್ಮ ಮತ್ತು ಹರಿಲಾಲ್**


■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**

ಕಲೆ: ಮನೋಹರ ಆಚಾರ್ಯ




## ಅಸಹಕಾರ ಚಳವಳಿಯಲ್ಲಿ...

ಅಸಹಕಾರ ಚಳವಳಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದಕ್ಕೂ ಮೊದಲು ಹರಿಲಾಲ ಒಂದೆರಡು ಕೆಲಸಗಳನ್ನು ಪೂರೈಸಲು ಬಯಸುತ್ತಿದ್ದ. ರಾಜಕೋಟದಲ್ಲಿ ಬೆಳೆಯುತ್ತಿದ್ದ ಮಗಳು ರಾಮಿಯ ಮದುವೆಯನ್ನು ಮಾಡಲು ಅವನು ಸಾಕಷ್ಟು ದಿನಗಳಿಂದ ಪ್ರಯತ್ನಿಸುತ್ತಿದ್ದ. ಗುಲಾಬ ಬದುಕಿದ್ದಾಗಲು ಸಹ ತನ್ನ ಮಗಳ ಬಗ್ಗೆ ತುಂಬಾ ವ್ಯಗ್ರಳಾಗಿರುತ್ತಿದ್ದಳು. ಹರಿಲಾಲನ ವ್ಯವಹಾರ ಬಿಗಡಾಯಿಸುತ್ತಿತ್ತು ಅವನ ಬಳಿ ಮಗಳ ಮದುವೆಗೆ ಬೇಕಾದ ಖರ್ಚನ್ನು ಭರಿಸುವಷ್ಟು ಹಣವಿರಲಿಲ್ಲ. ಗುಲಾಬ ತನ್ನ ಕೊನೆಯ ಉಸಿರಿರುವವರೆಗೆ ಈ ಕಷ್ಟದಿಂದ ಪಾರಾಗಲು ಸಾಧ್ಯವಾಗಲಿಲ್ಲ. ಹರಿಲಾಲನಿಗೆ ಈ ವಿಷಯ ತಿಳಿದಿತ್ತು. ಆದರೆ ಇದುವರೆಗೆ ಅವನು ಉರುಳಿಸಿದ ದಾಳಗಳು ಕೈಕೊಡುತ್ತಿದ್ದವು. ಮಕ್ಕಳ ಪಾಲನೆ ಪೋಷಣೆ ಚೆನ್ನಾಗಿಯೇ ಸಾಗುತ್ತಿತ್ತು, ಆದರೆ ಅದಕ್ಕೆ ಅವನಿಂದ ಯಾವ ಸಹಾಯವೂ ಲಭಿಸುತ್ತಿರಲಿಲ್ಲ. ಈ ನೋವು ಅವನನ್ನು ಸದಾ ತಿವಿಯುತ್ತಿತ್ತು. ಈ ಎಲ್ಲಾ ಸಮಸ್ಯೆಗಳು ಮತ್ತು ವ್ಯಗ್ರತೆಗಳ ನಡುವೆ ಅವನು ಅಸಹಕಾರ ಚಳವಳಿ ಮತ್ತು ಖಿಲಾಫತ್‌ನ ಹೋರಾಟದಲ್ಲಿ ಸಹ ಧುಮುಕಿದ್ದ. ಆದರೆ ಚಿಂತೆ ಅವನನ್ನು ಬಿಟ್ಟು ಹೋಗುತ್ತಿರಲಿಲ್ಲ. ಇದಕ್ಕೆ ವಿರುದ್ಧವಾಗಿ ಪರಿಸ್ಥಿತಿ ಹೇಗಿತ್ತೆಂದರೆ, ಅವನು ಕೈಹಾಕಿದ್ದ ಕೆಲಸಗಳೆಲ್ಲವೂ ಕೈಕೊಟ್ಟರೆ ಬಾಪೂ ಅವರ ಬಳಿ ಕೊಡಲು ಬಿಡಿಗಾಸೂ ಇರಲಿಲ್ಲ, ತನ್ನ ಮಕ್ಕಳು ಅನಾಥರಾಗುತ್ತಾರೆ ಎಂದು ಯೋಚಿಸಿ ಹರಿಲಾಲ ಗಾಬರಿಗೊಳ್ಳುತ್ತಿದ್ದ.

ಹೇಗಾದರೂ ಮಾಡಿ ಹಣವನ್ನು ಗಳಿಸಲೇ ಬೇಕೆಂಬ ಯೋಚನೆಯನ್ನು ಹರಿಲಾಲನಿಂದ ಬಿಡಲಾಗುತ್ತಿರಲಿಲ್ಲ. ಇದುವರೆಗೆ ಅವನು ಕೈಹಾಕಿದ್ದ ವ್ಯಾಪಾರಗಳು ಲಾಭವನ್ನು ತಂದಿರಲಿಲ್ಲ ಎಂಬುದಂತೂ ವಾಸ್ತವದ ಸಂಗತಿಯಾಗಿತ್ತು. ಆದರೂ ವ್ಯಾಪಾರವನ್ನು ಹೊರತುಪಡಿಸಿ ಬೇರೆ ವಿಧಾನಗಳಿಂದ ಹಣವನ್ನು ಸಂಪಾದಿಸಲು ಸಾಧ್ಯವಿಲ್ಲ ಎಂಬುದು ಹರಿಲಾಲನಿಗೆ ಚೆನ್ನಾಗಿ ತಿಳಿದಿತ್ತು. ಖಿಲಾಫತ್ ಹೋರಾಟದ ನಡುವೆ ಅವನು ಭೇಟಿಯಾದ ಹೊಸ ಸ್ನೇಹಿತರಲ್ಲಿ ಒಂದಿಬ್ಬರಿಗೆ ತನ್ನ ಮನಸ್ಸಿನಲ್ಲಾಗುತ್ತಿದ್ದ ತಳಮಳವನ್ನು ತಿಳಿಸಿದ. 'ಹರಿಲಾಲ್', ಸ್ನೇಹಿತನೊಬ್ಬ ಆಶ್ವಾಸನೆಯನ್ನು ನೀಡಿದ, 'ಇದುವರೆಗೆ ನೀವು ಮಾಲನ್ನು ಖರೀದಿಸುವುದು ಮತ್ತು ಮಾರುವ ಉದ್ಯೋಗದಲ್ಲಿ ನಿಮ್ಮನ್ನು ತೊಡಗಿಸಿಕೊಂಡಿದ್ದಿರಿ. ಅದರಲ್ಲಿ ನಿಮಗೆ ಲಾಭ ಸಿಗಲಿಲ್ಲ. ಈಗ ಹೊಸದಾಗಿ ಕಾರ್ಖಾನೆಯೊಂದನ್ನು ಹಾಕಿ, ಕೆಲವು ಮಾಲುಗಳನ್ನು ತಯಾರಿಸುವ ಉದ್ಯೋಗವನ್ನು ಪ್ರಾರಂಭಿಸಿ'.

'ಆದರೆ ಅದಕ್ಕೆ ಬಂಡವಾಳ...?' ಹರಿಲಾಲ ವಿಷಯಕ್ಕೆ ಬಂದ.

'ನೀವು ಬಾಪೂ ಅವರ ಮಗ...ಒಂದು ವೇಳೆ ನಾವು ನಿಮ್ಮ ಹೆಸರಿನಲ್ಲಿ ಒಂದೆರಡು ಲಿಮಿಟೆಡ್ ಕಂಪನಿಗಳನ್ನು ಆರಂಭಿಸಿದರೆ ಜನ ಕಂಪನಿಯ ಶೇರುಗಳನ್ನು ಖರೀದಿಸುತ್ತಾರೆ... ಆ ಶೇರುಗಳ ಮಾರಾಟದಿಂದ ಬರುವ ಬಂಡವಾಳದಿಂದ ನಮ್ಮ ಕಾರ್ಖಾನೆಯನ್ನು ಪ್ರಾರಂಭಿಸಬಹುದು' ಹೊಸ ಸ್ನೇಹಿತ ಯೋಜನಾಬದ್ಧವಾಗಿ ಇಡೀ ಕಾರ್ಯಕ್ರಮದ ರೂಪುರೇಷೆಗಳನ್ನು ತಯಾರಿಸಿದ.

'ನಿಮ್ಮ ಮಾತು ಯೋಚಿಸುವಂಥದ್ದಾಗಿದೆ' ಹರಿಲಾಲನಿಗೂ ಆಸಕ್ತಿಯುಂಟಾಯಿತು. ಅವನಿಗೆ ಇದುವರೆಗೆ ಲಿಮಿಟೆಡ್ ಕಂಪನಿಯ ಹೆಸರಿನಲ್ಲಿ ಸಾರ್ವಜನಿಕರಿಗೆ ಶೇರುಗಳನ್ನು ಮಾರಿ ಬಂಡವಾಳವನ್ನು ಒಟ್ಟು ಮಾಡುವ ವಿಷಯವೇ ತಿಳಿದಿರಲಿಲ್ಲ.

'ರಾವಲಪಿಂಡಿ ಮತ್ತು ಅಮೃತಸರದಲ್ಲಿ ನನಗೆ ಪರಿಚಿತರಿರುವ ತುಂಬಾ ಜನರಿದ್ದಾರೆ' ಆ ಹೊಸ ಸ್ನೇಹಿತ ಪೂರ್ಣವಾಗಿ ಮಾಹಿತಿಯನ್ನು ಕೊಡುತ್ತಾ ಹೇಳಿದ, 'ನೀವು ಕಂಪನಿಯ ಕಚೇರಿಯನ್ನು ಕಲ್ಕತ್ತಾದಲ್ಲಿ ಮಾಡಿಕೊಳ್ಳಿ, ನಾನು ರಾವಲಪಿಂಡಿ ಮತ್ತು ಅಮೃತಸರಕ್ಕೆ ಹೋಗಿ ಕಂಪನಿಯ ಶೇರುಗಳನ್ನು ಮಾರುವ ವ್ಯವಸ್ಥೆಯನ್ನು ಮಾಡುತ್ತೇನೆ. ಒಮ್ಮೆ ಕಾರ್ಖಾನೆ ಪ್ರಾರಂಭವಾದರೆ, ನಂತರದಲ್ಲಿ ಮಾಲಿನ ಮಾರಾಟದಿಂದ ಬರುವ ಹಣದಿಂದ ಲೇವಾದೇವಿ